Sri
# SAIRAM
## COLLEGE OF ENGINEERING
Anekal, Bengaluru

# ವಿಜಯವಾಣಿ
ಕನ್ನಡಿಗರ ಧ್ವನಿ

**Date: 28.04.2019**

**Edition: Bengaluru (Gramanthara)**

## Newspaper - Vijayavani

### ಪರಿಶ್ರಮವೊಂದೇ ಯಶಸ್ಸಿನ ಮಾರ್ಗ

■ ವಿಜಯವಾಣಿ ಸುದ್ದಿಜಾಲ ಆನೇಕಲ್

ಯಶಸ್ಸಿಗೆ ಕಠಿಣ ಪರಿಶ್ರಮವೊಂದೇ ಮಾರ್ಗ ಎಂದು ಏರೋಸ್ಪೇಸ್ ಇಂಜಿನಿಯರಿಂಗ್ ಸಲಹೆಗಾರ ಎಚ್.ಸುಧೀಂದ್ರ ಹೇಳಿದರು. ಪಟ್ಟಣದ ಶ್ರೀ ಸಾಯಿರಾಮ್ ಕಾಲೇಜ್ ಆಫ್ ಇಂಜಿನಿಯರಿಂಗ್‌ನಲ್ಲಿ ಶನಿವಾರ ಆಯೋಜಿಸಿದ್ದ ಪದವಿ ಪ್ರದಾನದಲ್ಲಿಮಾತನಾಡಿದರು. ದೇಶ ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಇಡೀ ಪ್ರಪಂಚದ ಮುಂಚೂಣಿಯಲ್ಲಿರುವ ಪ್ರಮುಖ ಐದು ದೇಶಗಳಲ್ಲಿ ಒಂದಾಗಿದೆ. ಡಾ.ಅಬ್ದುಲ್‌ಕಲಾಂ ಹಾಗೂ ಇತರ ಪ್ರತಿಭೆಗಳಿಂದ ಇದು ಸಾಧ್ಯವಾಗಿದೆ ಎಂದರು. ಡೆಲ್ ಇಂಟರ್‌ನ್ಯಾಷನಲ್ ಸರ್ವೀಸಸ್ ಮುಖ್ಯಸ್ಥ ಪ್ರಕಾಶ್ ಕುಮಾರ್ ಮಾತನಾಡಿ, 4 ವರ್ಷ ಇಂಜಿನಿಯರಿಂಗ್ ಪದವಿಯಲ್ಲಿ ಒಬ್ಬ ವಿದ್ಯಾರ್ಥಿಯು ಏನು ಕಲಿಯುತ್ತಾನೋ ಅದು ಸಾಕಾಗದು. ಕಲಿಕೆ ಒಂದು ನಿರಂತರ ಪ್ರಕ್ರಿಯೆಯಾಗಬೇಕು ಎಂದರು. ನಿವೃತ್ತ ಐಎಎಸ್ ಅಧಿಕಾರಿ ಸತ್ಯಮೂರ್ತಿ ಮಾತನಾಡಿದರು. ವಿಶ್ವವಿದ್ಯಾಲಯದಲ್ಲಿ ಮೆಕಾನಿಕಲ್ ವಿಭಾಗಕ್ಕೆ 2ನೇ ಶ್ರೇಯಾಂಕ ಪಡೆದ ವಿದ್ಯಾರ್ಥಿ ಮಿಟ್ಟು ಕುಮಾರ್ ಝಾ ಅವರಿಗೆ ಶ್ರೀ ಸಾಯಿರಾಮ್ ಸಮೂಹ ವಿದ್ಯಾಸಂಸ್ಥೆಗಳ ಚೇರಮನ್ ಸಾಯಿ ಪ್ರಕಾಶ್ ಲಿಯೋ, ಡಾ.ಅರುಣ್ ಕುಮಾರ್ ಮತ್ತು ರಾಜೇಂದ್ರನ್ ಅವರು ಉಡುಗೊರೆಯಾಗಿ 24 ಕ್ಯಾರೆಟ್ ಚಿನ್ನದ ಪದಕ ನೀಡಿ ಗೌರವಿಸಿದರು. ಕಂಪ್ಯೂಟರ್ ಸೈನ್ಸ್, ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಷನ್ ಮುಂತಾದ ವಿವಿಧ ಶಾಖೆಗಳಿಂದ 219 ವಿದ್ಯಾರ್ಥಿಗಳು ಪದವಿ ಪಡೆದರು. ಪ್ರಾಂಶುಪಾಲ ಡಾ.ವೈ.ವಿಜಯಕುಮಾರ್, ಉಪ ಪ್ರಾಂಶುಪಾಲ ಡಾ.ಬಿ.ಷಡಕ್ಷರಪ್ಪ ಮತ್ತಿತರರಿದ್ದರು.

» ಏರೋಸ್ಪೇಸ್ ಇಂಜಿನಿಯರಿಂಗ್ ಸಲಹೆಗಾರ ಎಚ್.ಸುಧೀಂದ್ರ ಅಭಿಮತ



MJF.LN. LEO MUTHU
Founder Chairman - Sairam Institutions

Sairam
INSTITUTIONS

Sri SAIRAM COLLEGE OF ENGINEERING

Anekal, Bengaluru

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

**Date: 29.04.2019**

**Edition: Bengaluru (Gramanthara)**

# Newspaper - Prajavani

ಎಂಜಿನಿಯರಿಂಗ್ ಕಾಲೇಜಿನಲ್ಲಿ ನಡೆದ ಪದವಿ ದಿನ

## ನವೀನ ಸಂಶೋಧನೆ ಕೈಗೊಳ್ಳಿ

ಪ್ರಜಾವಾಣಿ ವಾರ್ತೆ



ಆನೇಕಲ್ ತಾಲ್ಲೂಕಿನ ಗುಡ್ಡನಹಳ್ಳಿ ಸಮೀಪದ ಶ್ರೀಸಾಯಿರಾಮ್ ಕಾಲೇಜ್ ಆಫ್ ಎಂಜಿನಿಯರಿಂಗ್ ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ಪದವಿ ನೀಡಲಾಯಿತು

ಆನೇಕಲ್: ಭಾರತ ದೇಶದ ಅಭಿವೃದ್ಧಿಯಲ್ಲಿ ವಿಜ್ಞಾನ, ತಂತ್ರಜ್ಞಾನ, ಸಂಶೋಧನೆಗಳ ಮಹತ್ವ ಹೆಚ್ಚಿದ್ದು ಈ ನಿಟ್ಟಿನಲ್ಲಿ ಯುವ ಸಮುದಾಯ ನವೀನ ಸಂಶೋಧನೆಗಳನ್ನು ಮಾಡಬೇಕು ಎಂದು ಡಿಆರ್‌ಡಿಓ ನಿವೃತ್ತ ವಿಜ್ಞಾನಿ ಎಚ್.ಸುಧೀಂದ್ರ ತಿಳಿಸಿದರು.

ಅವರು ತಾಲ್ಲೂಕಿನ ಗುಡ್ಡನಹಳ್ಳಿ ಸಮೀಪದ ಶ್ರೀಸಾಯಿರಾಮ್ ಕಾಲೇಜ್ ಆಫ್ ಎಂಜಿನಿಯರಿಂಗ್ ಕಾಲೇಜಿನಲ್ಲಿ ಆಯೋಜಿಸಿದ್ದ 18ನೇ ಪದವಿ ದಿನದಲ್ಲಿ ವಿದ್ಯಾರ್ಥಿಗಳಿಗೆ ಪದವಿ ನೀಡಿ ಮಾತನಾಡಿದರು.

ಭಾರತ ದೇಶ ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ವಿಶ್ವದಲ್ಲೇ ಮುಂಚೂಣಿಯಲ್ಲಿರುವ ಪ್ರಮುಖ ಐದು ದೇಶಗಳಲ್ಲಿ ಒಂದಾಗಿದೆ. ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಗಳು ಬಹಳಷ್ಟು ಬೆಳೆದಿದ್ದು ಯುವ ಸಮುದಾಯ ತಮ್ಮ ಅನ್ವೇಷನೆಗಳ ಮೂಲಕ ಮತ್ತಷ್ಟು ಎತ್ತರಕ್ಕೆ ಕೊಂಡೊಯ್ಯಬೇಕು ಎಂದರು.

ಸತತ ಅಧ್ಯಯನ, ಕಠಿಣ ಶ್ರಮ ಯಶಸ್ಸಿನ ಕೀಲಿಕೈಗಳಾಗಿದ್ದು ಯಶಸ್ಸಿಗೆ ಯಾವುದೇ ಅಡ್ಡ ಮಾರ್ಗಗಳಿಲ್ಲ. ಹಾಗಾಗಿ ವಿದ್ಯಾರ್ಥಿಗಳು ಪದವಿಯ ಜೊತೆಗೆ ಜ್ಞಾನಾರ್ಜನೆಗೆ ಹೆಚ್ಚಿನ ಒತ್ತು ನೀಡಬೇಕು. ವಿದ್ಯಾರ್ಥಿಗಳು ಹೊಸ ಹೊಸ ಪ್ರಯೋಗಗಳನ್ನು ಮಾಡುವುದರಿಂದ ಚಿಂತನಾ ಸಾಮರ್ಥ್ಯ ಹಾಗೂ ವೈಜ್ಞಾನಿಕ ಮನೋಭಾವನೆ ಬೆಳೆಯುತ್ತದೆ ಎಂದರು.

ಡೆಲ್ ಇಂಟರ್‌ನ್ಯಾಷನಲ್ ಸರ್ವೀಸಸ್ ಸಂಸ್ಥೆಯ ಸಲಹೆಗಾರರಾದ ಪ್ರಕಾಶ್‌ಕುಮಾರ್ ಮಾತನಾಡಿ ತಾಂತ್ರಿಕತೆ ದಿನದಿಂದ ದಿನಕ್ಕೆ ಬದಲಾಗುತ್ತಿದೆ. ಕಲಿಕೆ ಎಂಬುದು ನಿರಂತರ ಪ್ರಕ್ರಿಯೆ ಹಾಗಾಗಿ ವಿದ್ಯಾರ್ಥಿಗಳು ನಿರಂತರ ಕಲಿಕೆಯನ್ನು ರೂಢಿಸಿಕೊಳ್ಳಬೇಕು. ನಾಲ್ಕು ವರ್ಷಗಳ ಇಂಜಿನಿಯರಿಂಗ್ ಪದವಿಯಲ್ಲಿ ಕಲಿತ ವಿಷಯಗಳನ್ನು ಆಳವಾಗಿ ಅಧ್ಯಯನ ನಡೆಸಿ ವಿಜ್ಞಾನಕ್ಕೆ ಕೊಡುಗೆ ನೀಡಬೇಕು ಎಂದರು.

ಸಾಯಿರಾಮ್ ಗ್ರೂಪ್ ಸಮೂಹ ಸಂಸ್ಥೆಗಳ ಕಾರ್ಯನಿರ್ವಾಹಕ ನಿರ್ದೇಶಕ ಸತ್ಯಮೂರ್ತಿ, ಕಾಲೇಜಿನ ಆಡಳಿತ ಮಂಡಳಿತ ಅರುಣ್‌ಕುಮಾರ್, ಪ್ರಾಚಾರ್ಯ ಡಾ.ವೈ.ವಿಜಯಕುಮಾರ್, ಉಪಪ್ರಾಚಾರ್ಯ ಡಾ.ಬಿ.ಷಡಕ್ಷರಪ್ಪ ಹಾಜರಿದ್ದರು.

**Page No.3B**

MJF.LN. LEO MUTHU

Founder Chairman - Sairam Institutions

Sairam INSTITUTIONS

தினத் தந்தி
DAILY THANTHI

**Date: 28.04.2019** **Edition: Bengaluru**

## Newspaper - Dinathanthi



ஸ்ரீசாய்ராம் கல்லூரியில்

# 219 மாணவர்கள் பட்டம் பெற்றனர்

பெங்களூரு, ஏப்.28-
பெங்களூரு ஆனேக்கல்லில் ஸ்ரீசாய்ராம் என்ஜினீயரிங் கல்லூரி உள்ளது. இந்த கல்லூரியின் 18-வது பட்டமளிப்பு விழா கல்லூரி அரங்கில் நடந்தது. விழாவுக்கு ஸ்ரீசாய்ராம் கல்வி குழுமங்களின் செயல் இயக்குனர் ஒய்.விஜயகுமார் தலைமை தாங்கி பேசினார். விழாவில் சிறப்பு விருந்தினர்களாக கலந்துகொண்ட முன்னாள் விஞ்ஞானி சுதிந்திரா, நிர்வாக பிரதிநிதி ஆர்.அருண்குமார் ஆகியோர், பல்கலைக்கழக அளவில் மெக்கானிக்கல் துறையில் 2-வது ரேங்க் பெற்ற மித்துகுமார் ஜா என்ற மாணவரை பாராட்டி சான்றிதழ் வழங்கினர். மேலும் அந்த மாணவரை பாராட்டி, சாய்ராம் கல்வி குழும சேர்மன் சாய் பிரகாஷ் லியோ முத்து தங்கப்பதக்கம் வழங்கி கவுரவித்தார். மேலும் பிற துறைகளில் முதலிடம் பிடித்த மாணவர்களும் கவுரவிக்கப்பட்டனர்.

பின்னர் மாணவ-மாணவிகளுக்கு பட்டங்கள் வழங்கப்பட்டன. இதில் கம்ப்யூட்டர் சயின்ஸ், எலெக்ட்ரானிக் அன்ட் கம்யூனிகேசன்ஸ் உள்பட பல்வேறு துறைகளை சேர்ந்த 219 மாணவ-மாணவிகள் பட்டங்களை பெற்றனர்.

விழாவில், டெல் இன்டர்நேசனல் சர்வீஸ் முதன்மை ஆலோசகர் பிரகாஷ் குமார், ஓய்வுபெற்ற ஐ.ஏ.எஸ். அதிகாரி சத்தியமூர்த்தி, கல்லூரி முதல்வர், பல்வேறு துறைகளின் தலைவர்கள், பேராசிரியர்கள் கலந்துகொண்டனர். முடிவில் கல்லூரியின் துணை முதல்வர் சடாக்ஷரப்பா நன்றி கூறினார்.

Page No.2